doc-156
TP-2

SATYAVADI Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 29 ಸಂಚಿಕೆ 154 | ಗುರುವಾರ 21–2–46 | ಬಿಡಿ ಪ್ರತಿ 3 ಪೈ

ಬೊಂಬಾಯಿನಲ್ಲಿ ನಾವಿಕ ಮುಷ್ಕರ

ಸರಿವಾರ ಸಚೇತರಾಗಿ ಗಾಂಧೀಜೀ ರವರು ಸಿಸ್ಡೆ ಸಂಜೆ ಪೂನಾಕ್ಕೆ ಪ್ರಯಾಣ ಮಾಡಿದರು.

ಮಾರ್ಚ್ ಅಂತ್ಯದಲ್ಲಿ ಪೆಥಿಕ್‌ಲಾರನ್ಸ್ ಸ್ಟಾಫರ್ಡ್ ಕ್ರಿಪ್ಸರು ಮತ್ತು ಅಲೆಕ್ಸಾಂಡರರು ಭಾರತ ರಾಜ್ಯಾಂಗ ಪ್ರಶ್ನೆಯನ್ನು ಇತ್ಯರ್ಥಪಡಿಸುವ ಸಲುವಾಗಿ ಭಾರತಕ್ಕೆ ಭೇಟಿ ಕೊಡುವರೆಂದು ಅಟ್ಲೀರವರು ಕಾಮನ್ಸಿನಲ್ಲಿ ತಿಳಿಸಿರುವರು.

ಅಸ್ಸಾಂನಲ್ಲಿ ರಾಜಕೀಯ ಖೈದಿಗಳೆಲ್ಲರೂ ಬಿಡುಗಡೆಯಾಗಬೇಕೆಂದು ಅಲ್ಲಿನ ಕಾಂಗ್ರೆಸ್ ಸರ್ಕಾರದ ಆಜ್ಞೆಯಾಗಿದೆ.

ಮೈಸೂರು

ಅಹಾರ ಪರಿಸ್ಥಿತಿ

ಮೈಸೂರು ಸಂಸ್ಥಾನದಲ್ಲಿ ಇನ್ನು ಎಂದರೆರಡು ತಿಂಗಳಿಗಾಗುವಷ್ಟು ದವಸವಿದೆ ಹೆಚ್ಚು ದವಸ ಕಳುಹಿಸಲು ಏರ್ಪಾಡು ನಡೆಯುತ್ತಿದೆ ಅಲ್ಲಿಯ ಸರ್ಕಾರ ಹೆಚ್ಚು ಬೆಳೆ ಬೆಳೆಯುವ ಯೋಜನೆ ಮಾಡಿದೆ — ಎಂಬುದಾಗಿ ಸೇಂ ಕೇಂದ್ರ ಸಭೆಯಲ್ಲಿ ತಿಳಿಸಿದ್ದಾರೆ.

ಭಾರತ ರಾಜ್ಯಾಂಗ ಪರಿಸ್ಥಿತಿಯು ಒಗೆಹರಿಯುವುದಕ್ಕಾಗಿ ತಾ || 25 ರಲ್ಲಿ ಅಗಾಖಾನರು ಭೂಪಾಲ ನವಾಬರೊಂದಿಗೆ ಪೂನಾದಲ್ಲಿ ಗಾಂಧೀಜೀಯನ್ನು ಭೇಟಿ ಮಾಡುವರು.

ಗಾಂಧೀಜೀ ಸಲಹೆಯ ಮೇರೆ ಬೊಂಬಾಯಿನ ಮಾಜೀ ಮಂತ್ರಿ ಶ್ರೀ ಮುನ್ಷಿ ಕಾಂಗ್ರೆಸ್ ಸೇರಿದರು.

ಮೈಸೂರು ದಿವಾನರು

ಲಂಡನ್ ಫೆ 19 — ಮೈಸೂರು ದಿವಾನರು ತಾ || 25 ರಲ್ಲಿ ಲಂಡನ್ನಿನಿಂದ ಅಮೇರಿಕಾಕ್ಕೆ ಹೋಗುವರು.

ರಷ್ಯಾದ ಆಹಾರ

ಲಂಡನ್ ಫೆ 19— ರಷ್ಯಾದವರು ಭಾರತಕ್ಕೂ ಮತ್ತು ಅಕ್ಕಪಕ್ಕದ ಯೂರೋಪಿನ ರಾಜ್ಯಗಳಿಗೂ ಆಹಾರ ಸರಬರಾಜು ಮಾಡುವರೆಂದು ತುಂಬಾ ಭರವಸೆಯುಳ್ಳವನಾಗಿದ್ದೇನೆ ಎಂದು ಮಿ || ಅಟ್ಲೀಯವರು ಕಾಮನ್ಸ್ ಸಭೆಯಲ್ಲಿ ತಿಳಿಸಿದರು.

ನಗರಾಭಿವೃದ್ಧಿ ಸಭೆ

ಮೈಸೂರು ಫೆ 21 — ಇದೇ ತಾರೀಖು 27 ರಲ್ಲಿ ಮೈಸೂರು ನಗರಾಭಿವೃದ್ಧಿ ಸಭೆ ಸೇರುವುದು.

ನಿಳಿಪ ರಲ್ಲೂ ಈ ಗೋಳೇ

ಈ ವರ್ಷ ಮೊತ್ಸವಲ್ಲ, 1942 ರಲ್ಲೂ ಆಹಾರದ ಪರಿಸ್ಥಿತಿಯೂ ಆಜ್ಞೊಂದು ಜೆನ್ನಾಗಿರದು ಎಂಬದಾಗಿ ತಜ್ಞರು ಅಭಿಪ್ರಾಯ ಪಡುತ್ತಾರೆ.

ಪೌಕಾ ಜನರ ಮುಷ್ಕರ

ಬೊಂಬಾಯಿ ಫೆ 19— ಈ ದಿನ 12 ಘಂಟೆ ಹೊತ್ತಿನಲ್ಲಿ ಸುಮಾರು 7000 ಮಂದಿ ಮುಷ್ಕರ ಹಿಡಿದಿರುವರು.

ಕಾಂಗ್ರೆಸ್-ಲೀಗ್ ಜೂಜು

ಲಾಹೋರು ಫೆ 20— ಪಂಜಾಬಿನ ಚುನಾವಣೆಯಲ್ಲಿ ಕಾಂಗ್ರೆಸ್ ಲೀಗಿಗೆ ಜೂಜಾಗಿದೆ. ಈಗಿನ ಲೆಕ್ಕದಂತೆ ಲೀಗಿಗೆ 31, ಕಾಂಗ್ರೆಸ್ಸಿಗೆ 29 ಸ್ಥಾನಗಳು ದೊರೆತಿವೆ.

ಪಂ || ನೆಹರು

ಅಲಹಾಬಾದು, ಫೆ 19 — ಬ್ರಿಟಿಷು ಮಂತ್ರಿ ಮಂಡಲ ನಿಯೋಗದೊಡನೆ ಮಾತ ಕತೆಗಳು ಪೂರ್ಣ ಸ್ವಾತಂತ್ರ್ಯ ದ ತತ್ವದ ಮೇಲೆಂದೂ ರಚನಾತ್ಮಕ ಸಭೆಗೆ ಹಿಡಿತವಿಲ್ಲದ ಅಧಿಕಾರವಿರಬೇಕೆಂದೂ ಪಂ || ನೆಹರು ಹೇಳಿರುವರು.

ಪೌರಸಭೆ

ಅನ್ನ ಪರಿಸ್ಥಿತಿಯ ಮೇಲೆ ಚರ್ಚೆ

' ಮದುವೆ ಮುಂಜಿ ತಿಥಿಗಳನ್ನು ನಿಲ್ಲಿಸಬೇಕು '

ಮೈಸೂರಿನಲ್ಲಿ ಅನ್ನ ಭಯ !

' ಮೈಸೂರು ನಗರದ ಅನ್ನ ಪರಿಸ್ಥಿತಿಯನ್ನು ಪರಿಶೀಲಿಸಿ ' ಮಾಡುವ ಬಗ್ಗೆ ಪೌರಸಭೆಯ ವಿಶೇಷ ಅಧಿವೇಶನವು ನಿನ್ನೆಯ ದಿನದ ಮಧ್ಯಾಹ್ನ 4–5 ಘಂಟೆಗೆ ಸರಿಯಾಗಿ ಶ್ರೀ ಆರ್.ರಾಮಚಂದ್ರರಾವ್ ಬಾಂಭೋರೆಯವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು.

ಪೌರಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಬಿ ನಾರಾಯಣ ಸ್ವಾಮಿಯ್ಯನವರು ಸಮಾವೇಶವನ್ನು ಸೇರಿಸಿದ್ದರ ಕಾರಣವನ್ನು ವಿವರಿಸುತ್ತಾ ಇಡೀ ವಿಶ್ವಕ್ಕೇ ಆವರಿಸಿರುವ ಅನ್ನದ ಸ್ಥಿತಿ, ಭಾರತದೇಶದಲ್ಲಿನ ಹಲವು ಭಾಗಗಳಲ್ಲಿ ಉಂಟಾಗಿರುವ ಊಲ್ಬಣ ಸ್ಥಿತಿ, ದಕ್ಷಿಣ ಭಾರತದ ವಿಷಮ ಪರಿಸ್ಥಿತಿ, ಮೈಸೂರಿನ ದಕ್ಷಿಣ ಭಾರತ ಪ್ರವಾಸ, ಸಂಸ್ಥಾನದಲ್ಲಿ ಕ್ವಾಣು ಪೀಡಿತ ಸ್ಥಳಗಳಿಗೆ ಪ್ರಭು ಭೇಟಿ ಮತ್ತು 38 ಲಕ್ಷ ರೂ. ಕಂದಾಯ ಮಾಫಿ ಮುಂತಾದ ಪ್ರಸಂಗವನ್ನು ಸರಳವಾಗಿ ತಿಳಿಸಿ, ನಗರದ ಅನ್ನ ಸಮಸ್ಯೆಯ ಬಗ್ಗೆ ಜಾಗ್ರತೆ ವಹಿಸಬೇಕೆಂದರು. ನಗರದ ಪಡಿಭತ್ಯಾಧಿಕಾರಿಗಳಾದ ಶ್ರೀ ಟಿ. ವಿ. ರೆಡ್ಡಿಯವರು ಸಭೆಗೆ ಆಗಮಿಸಿದ್ದರು.

ಅನ್ನ ಸಮಸ್ಯೆಯ ವಿಷಯವಾಗಿ ಅಧ್ಯಕ್ಷರು, ' ಮಳೆಯು ಆಗಲಿಲ್ಲವಾದ ಪ್ರಯುಕ್ತ ಬೆಳೆ ಹೋಯಿತು. ಕೇವಲ 300 ಟೀಲರಾಗಿ ದಾಸ್ತಾನಿರುವ ಪ್ರಯುಕ್ತರಾಗಿ ಪಡಿಭತ್ಯ ದೊರೆಯುವುದಾಗಿಲ್ಲ. ಉದ್ಯಾನವನಗಳನ್ನೆಲ್ಲಾ ತರಕಾರಿ ಬೆಳೆಯುವ ತೋಟವನ್ನಾಗಿ ಮಾಡಬೇಕು. ಎಲ್ಲಕ್ಕಿಂತಲೂ ಹೆಚ್ಚಿಗೆ ಅಂದರೆ ಪ್ರಜೆಗಳು ತ್ಯಾಗಶೀಲರಾಗಬೇಕು. ನಿಸ್ವಾರ್ಥಿಗಳಾಗಬೇಕು. ಮದುವೆ ಮುಂಜಿ, ತಿಥಿವುಂತಾದುವುಗಳು ನಿಂತು ಹೋಗಬೇಕು. ಕಾಳಸಂತೆಕೋರರನ್ನು ಪೋಲಿಸರ ವಶಮಾಡಬೇಕು. ವಿಶ್ರಾಹಾರಗಳನ್ನು ಪ್ರಜೆಗಳು ಉಪಯೋಗಿಸಬೇಕು ' ಎಂಬುದಾಗಿ ತಿಳಿಸಿದರು.

ಮೈಸೂರಿನ ಧಾನ್ಯಗಳ ಅಂಕಿ ಅಂಶಗಳನ್ನು ವಿವರಿಸುತ್ತಾ, ಅಧ್ಯಕ್ಷರು, ' ಈಗ ಮೈಸೂರಿನಲ್ಲಿ 96 ಊಟದ ಹೋಟೆಲುಗಳೂ, 99 ಫಲಹಾರ ಮಂದಿರಗಳೂ ಮತ್ತು 16 ಉಡಾಯಿ ಅಂಗಡಿಗಳೂ ಇವೆ. ಇವುಗಳಿಗೆಲ್ಲಾ ಒಟ್ಟು 286 ಮೂಟೆ ಸಕ್ಕರೆಗಳನ್ನು ಸರಬರಾಜು ಮಾಡಲಾಗುತ್ತಿದೆ. ಇವುಗಳಿಗಾಗಿ 310 ಪಲ್ಲ ಗೋಧಿಯನ್ನು ಸರಬರಾಜು ಮಾಡಲಾಗುತ್ತಿದೆ. 1200 ಪಲ್ಲ ಅಕ್ಕಿಯು ಸರಬರಾಜು ಆಗುತ್ತಿದೆ. ಮೈಸೂರು ನಗರದ ಪ್ರಜಾಸಂಖ್ಯೆ 215870. 11300 ಪಲ್ಲ ಅಕ್ಕಿ. 6283 ಪಲ್ಲ ಧಾನ್ಯ 3031 ಪಲ್ಲ ಗೋಧಿ ಮತ್ತು ಗೋಧಿ ಪದಾರ್ಥ ಮತ್ತು 1900 ಮೂಟೆ ಸಕ್ಕರೆ ನಗರಕ್ಕೆ ಪ್ರತಿತಿಂಗಳೂ ಬೇಕು. ಆಹಾರ ಸಾಮಗ್ರಿಗಳ ದಾಸ್ತಾನಿಷ್ಟಿರುವುದೆಂಬುದರ ಲೆಕ್ಕ ಇನ್ನೂ ಎತ್ತಿಲ್ಲ. ಈ ನಗರದಲ್ಲಿ ಒಟ್ಟು 116 ಡಿಪೋಗಳಿವೆ. ಇವುಗಳ ಪೈಕಿ 16 ಮಾತ್ರ ಸರ್ಕಾರದ ಅಧೀನದಲ್ಲಿವೆ. ಉಳಿದುವುಗಳೆಲ್ಲವೂ ವರ್ತಕರು ಇತ್ಯಾದಿಗಳ ಅಧೀನದಲ್ಲಿರುವುವು. ತಾತ್ಕಾಲಿಕ ಪಡಿಭತ್ಯದಾರರುಗಳ ಸಂಖ್ಯೆ 9480 ' ಎಂಬುದಾಗಿ ತಿಳಿಸಿದರು (ವಿದ್ಯಾರ್ಥಿ ನಿಲಯ ಮತ್ತು ಅಸ್ಪತ್ರೆಗಳಿಗೆ ಪೂರ್ಣ ರೇಷನ್ ಕೊಡಲಾಗುತ್ತಿದೆ.)

ಶ್ರೀ ಟಿ. ಮರಿಯಪ್ಪನವರು ಮಾತನಾಡುತ್ತಾ ಹಾಲಿ ಸರ್ಕಾರದಲ್ಲಿ ರೈತನಿಗೆ ಎಳ್ಳಷ್ಟೂ ನಂಬಿಕೆಯಿಲ್ಲ. ಆದಕ್ಕಾಗಿಯೇ ಮಹಾತ್ಮ ಗಾಂಧೀಜೀಯವರು ಅನ್ನ ಪರಿಸ್ಥಿತಿ ಸರಿಯಾಗ ಬೇಕಾದರೆ ರಾಷ್ಟ್ರೀಯ ಸರ್ಕಾರವೇ ಮದ್ದು ಎಂದಿರುವರು; ದಾಸ್ತಾನಿನ ಬಗ್ಗೆ ಪರಿಜ್ಞಾನವೇ ಇಲ್ಲದ ಪ್ರಯುಕ್ತ, ಧಾನ್ಯಗಳು ನಾಶವಾಗುತ್ತಿವೆ ತರಕಾರಿಗಳನ್ನು ಬೆಳೆಯಲು ಪ್ರೋತ್ಸಾಹ ಕೊಡಬೇಕು. ಇದೇ ರೀತಿ ನಡೆದರೆ ಒಂದೆರಡು ತಿಂಗಳಿನಲ್ಲಿಯೇ ಮೈಸೂರು ಕ್ವಾವ.ಕ್ಕೇಡಾಗುವುದು. ಹೋಟೆಲುಗಳಿಗೆ ಹಾಲು ಸರಬರಾಜು ನಿಲ್ಲಿಸಿ, ಅದನ್ನು ಮಕ್ಕಳು ಮತ್ತು ವೃದ್ಧರುಗಳಿಗೆ ಹಂಚಿ ಎಂಬುದಾಗಿ ತಿಳಿಸಿದರು.

ಜ || ಅಹ್ಮದ್ ಖಾನರು ಧಾನ್ಯದ ಅಳತೆಯಲ್ಲಿ ವ್ಯತ್ಯಾಸ ಬರುವುದಾಗಿ ತಿಳಿಸಿದರು.

ಮೈಸೂರಿಗೆ ಆಹಾರ ಸರಬರಾಜು ಸರಿಯಾಗಿ ಆಗಬೇಕೆಂದು ನಿರ್ಣಯಮಾಡಲಾಯಿತು.

ಮೈಸೂರು ಪೌರಸಭೆಯ ಆರೋಗ್ಯ ಶಾಖೆಯ ವರದಿಯ ಪ್ರಕಾರ ಇದುವರೆವಿಗೆ 42 ಸಾವಿರ ಮಂದಿಗೆ ದೇವಿ ಹಾಕಲಾಗಿದೆ.

ಮಹಾರುದ್ರಹೋಮ

(ಸ. ಸು.) ನಂಜನಗೂಡು, ಫೆ 20 ಶ್ರೀಮಾಕ' ವೈದ್ಯ ವಿದ್ಯಾರ್ಥಿ ಭವನ ಗೃಹ್ಯ ಬಿ. ವಿ. ಪಂಡಿತರ ಅಧ್ಯಕ್ಷತೆಯಲ್ಲಿ ಸ್ಥಾಪಿತವಾದ ಸಮಿತಿಯವರು ಏರ್ಪಡಿಸಿದ್ದ ಮಹಾರುದ್ರಹೋಮವು ಕಳೆದ ತಾ॥ 10 ರಿಂದ ಸಾಂಗೋಪಾಂಗವಾಗಿ ನಡೆದುಕೊಂಡು ಬಂದು ಈ ದಿವಸ ಪೂರ್ಣಾಹುತಿಯೊಡನೆ ಮುಕ್ತಾಯವಾಯಿತು. ಭಕ್ತಾದಿಗಳು ಪೂರ್ಣಾಹುತಿಯಲ್ಲಿ ಅಗ್ನಿ ದೇವರಿಗೆ ಸಮರ್ಪಣೆ ತಾಂಬೂಲ ವಿತರಣೆಗೆ ಭಕ್ತಿ ಮನಸ್ಸಿನಿಂದ ಅರ್ಪಿಸಿದರು. ಸಂತರ್ಪಣೆಯಲ್ಲಿ ಸ್ಥಳಪರಸ್ಥಳದವರು ಭಾಗವಹಿಸಿದ್ದರು. ಹೋಮವು ವಿಧಿವತ್ತಾಗಿ ಅಮೂಲಾಗ್ರವಾಗಿ ಜರುಗಿತು. ಸಮಿತಿಯ ಅಧ್ಯಕ್ಷರ ಶ್ರದ್ಧೆ ಮತ್ತು ಭಕ್ತಿಯಿಂದ ಈ ಮಹತ್ಕಾರ್ಯವು ಸುಲಲಿತವಾಗಿ ಜರುಗಿದೆ

ನಾಗಾಲೇಕನ ದಿರುಸಿನಲ್ಲಿ ಜಪಾನ್ ಚಕ್ರವರ್ತಿಯವರು ಪ್ರಜಾವರ್ಗದ ಮುಂದೆ ಪ್ರವಾಸ ಮಾಡಿರುವುದು ಚರಿತ್ರೆಯಲ್ಲಿ ಸ್ಮರಣೆಯ ಘಟನೆಯಾಗಿದೆ.

ಂ • ರ

ಜ್ಯೋತಿಷ್ಯಕಾಶನಾರಾಯಣರನ್ನು ಅವರ ಪತ್ನಿಯವರು ಲಾಹೋರು ಜೈಲಿನಲ್ಲಿ ಭೇಟಿ ಮಾಡಿದರು.

At Ranjit

TAQDEER

ತಾ॥15 2 ರಿಂದ

ತಕದೀರ್

ನಾರ್ಗೀಸ್, ಮೋತಿಲಾಲ್, ಚಾರ್ಲ್

ಹಸಕ ಬೆಟ್ಟದಪುರದ

ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

ರಾವಂದೂರ್ ವೀರಶೆಟ್ಟಿ & ಸಕ

ಶಿವರಾಂಪೇಟೆ ಮೈಸೂರು.

2 nd Week At Opera —

ಪರಂಜ್ಯೋತಿ

ಎ. ಎ. ಚೆಲ್ಲಪ್ಪ ಸಿ. ಪಿ. ರಾಜಲಕ್ಷ್ಮಿ

ಬಾಲ ಸುಬ್ರಹ್ಮಣ್ಯಂ ಜಯಗೌರಿ

ಕೃಷ್ಣ ಮಧುರಂ ಪಾತ್ರದಾರರು

ಮುಂದಿನ ವಿನೋದ

ಸುರೇಂದ್ರ, ಮೇಹತಾಬ್

ಪಾತ್ರವಹಿಸಿರುವ

ವಿಶ್ವಾಸ್

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು

— ಶುಭ್ರಮಾಡುವ ಸಾಧಕ —

ಮೈಸೂರ್ ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;

ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;

ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು

ಸಾಬೂನು

ಕೊಳಕು ಬಟ್ಟೆಗಳನ್ನು

ಸ್ವಚ್ಛಗೊಳಿಸುವುದು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಸುಖ ಆರೋಗ್ಯ ಆನಂದದಾಯಕ



ಜೀವಿತ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ

ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘಸವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಸಲಂ ಸ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವಂಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಎಳ. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ರಕ್ತವರ್ಧಿಗೆ — ಧಾತುಪುಷ್ಟಿಗೆ

ಸಂಜೀವನ

ಶಕ್ತಿಸುಧಾ

ಬೆಲೆ ಡಬ್ಬಿಗೆ ರೂ. ೧.೪-೦

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು

Edited, Printed and published by M. S. Krishna Rao, at the Satyavadi Press, Chamaraja Agrahar, Mysore

For Good Printing

L. N. Press

Sriramp at MYSORE